ಯುವಜನರ ಭಾನುವಾರ- ಆರಾಧನಾ ಕ್ರಮ

ಮುಖ್ಯ ಪ್ರಸ್ತಾಪ : ಕ್ರಿಸ್ತನೊಂದಿಗೆ ಕಾರ್ಯನಿರತರಾದ ಯುವಜನರು

ಸತ್ಯವೇದ ಭಾಗ: ದಾನಿಯೇಲ 1 : 1 -17 , (ಉತ್ತರ ಪ್ರತ್ಯುತ್ತರಕ್ಕಾಗಿ ಕೀರ್ತನೆಗಳ ಸಂಗ್ರಹ 98, ಆಪೋ. ಕೃತ್ಯಗಳು. 6 : 1 -7 , ಯೋಹಾನ 1 : 35 -42

ಆರಾಧನೆಗೆ ಕರೆ:

ಸಭಾಪಾಲಕರು: "ಕಷ್ಟದ ದಿನಗಳೂ ಸಂತೋಷವಿಲ್ಲವೆಂದು ನೀನು ಹೇಳುವ ವರುಷಗಳೂ ಸಮೀಪಿಸುವದರೊಳಗಾಗಿ ಯೌವನದಲ್ಲಿಯೇ ನಿನ್ನ ಸೃಷ್ಟಿಕರ್ತನನ್ನು ಸ್ಮರಿಸು." ಪ್ರಸಂಗಿ 12 :1

ಸಭೆ: ಸೃಷ್ಟಿಕರ್ತನಾದ ದೇವಾ, ನಮ್ಮ ಜೀವದ ಮೂಲವೂ ನಮ್ಮ ಬಲವೂ ನೀನಾಗಿರುವುದಕ್ಕಾಗಿ ನಾವು ನಿನ್ನ ಸಮೀಪಕ್ಕೆ ಬರುತ್ತೇವೆ. ಈ ಆರಾಧನಾ ಸಮಯದಲ್ಲಿ ನಾವು ದೀನತೆಯಿಂದಲೂ ಸೌಮ್ಯತೆಯಿಂದಲೂ ನಿನ್ನ ಮುಂದೆ ಬರುತ್ತೇವೆ. ನೀನಿತ್ತ ಜೀವದ ವರವನ್ನೂ ನಮ್ಮ ಮೇಲೆ ನೀನು ಸುರಿಸಿದ ಸಮಸ್ತ ಆಶೀರ್ವಾದಗಳನ್ನೂ ನಾವು ಒಪ್ಪಿಕೊಳ್ಳುತ್ತೇವೆ. ನಮ್ಮ ಆರಾಧನೆಯನ್ನು ಸ್ವೀಕರಿಸು. ಈ ಆರಾಧನಾ ಸಮಯವು ನಮ್ಮನ್ನು ಜೀವಮಾರ್ಗದಲ್ಲಿ ನಡೆಸುವಂತಾಗಲೆಂದು ನಮ್ಮ ಪ್ರಭುವಾದ ಯೇಸು ಕ್ರಿಸ್ತನ ನಾಮದಲ್ಲಿ ಬೇಡಿಕೊಳ್ಳುತ್ತೇವೆ. **ಆಮೆನ್.**

ಆರಂಭ ಸಂಗೀತ:

ಸ್ತುತ್ಯಾರಾಧನೆ:

ನಾಯಕರು: ಸೌಂದರ್ಯವನ್ನು ಕಳಕೊಂಡ ಸೃಷ್ಟಿಯಲ್ಲಿ, ಹಾಳಾದ ಜೀವಿತಗಳಲ್ಲಿ

ಸಭೆ: ನಿನ್ನ ಮುಖವನ್ನು ನಾವು ಕಾಣುತ್ತೇವೆ.

ನಾಯಕರು: ಸೃಷ್ಟಿಯ ನರಳಾಟದಲ್ಲಿ ಮತ್ತು ಶೋಷಿತ ಜೀವಿತಗಳಲ್ಲಿ

ಸಭೆ: ನಿನ್ನ ಶ್ರಮೆಯ ಸಾಂಗತ್ಯವನ್ನು ನಾವು ಕಾಣುತ್ತೇವೆ.

ನಾಯಕರು: ವಿಶ್ವಾಸದ ನಮ್ಮ ಪಯಣದಲ್ಲಿ ಹಾಗೂ ಪ್ರಪಂಚದಲ್ಲಿ ಕ್ರೂಜಿತ ಕ್ರಿಸ್ತನಿಗಾಗಿ
ನಮ್ಮ ಸಾಕ್ಷಿಯಲ್ಲಿ

ಸಭೆ: ನಿನ್ನ ಪ್ರೀತಿ ಕರುಣೆಗಳನ್ನು ನಾವು ಕಾಣುತ್ತೇವೆ.

ಎಲ್ಲರೂ: ಯುಗಯುಗಾಂತರಗಳಲ್ಲಿಯೂ ಸದಾ ಜೀವಿಸಿ ಆಳುವಾತನಾದ ನಿನಗೆ,
ನಿನಗೆ ಮಾತ್ರ ಸ್ತುತಿಯುಂಟಾಗಲಿ. ಆಮೆನ್.

ಕೃತಜ್ಞತಾ ಸ್ತೋತ್ರದ ಹುದುವಾದ ಪ್ರಾರ್ಥನೆ: (ಎಲ್ಲರೂ ಒಟ್ಟಾಗಿ)

ಸೃಷ್ಟಿಕರ್ತನಾದ ದೇವರೇ, ನಮ್ಮ ಜೀವಿತದಲ್ಲಿ ನೀನಿತ್ತ ಸಮಸ್ತ ಆಶೀರ್ವಾದಗಳಿಗಾಗಿ ನಿನ್ನನ್ನು ವಂದಿಸುತ್ತೇವೆ. ನಾವು ಕೃತಜ್ಞತೆಯಿಂದ ನಮ್ಮನ್ನು ತಗ್ಗಿಸಿಕೊಂಡು ನಿನ್ನ ಮುಂದೆ ಬರುತ್ತೇವೆ. ನಾವಾದರೋ ನಮ್ಮ ಜೀವಿತಕ್ಕೆ

ಅಗತ್ಯವಾದುವುಗಳನ್ನು ಅನುಗ್ರಹಿಸಿದ ಎಲ್ಲವುಗಳನ್ನು ಲಘುವಾಗಿ ಪರಿಗಣಿಸಿದ್ದೇವೆ. ನೀನು ಅನೇಕ ಚಿಹ್ನೆಗಳ ಮೂಲಕ ಎಲ್ಲವುಗಳನ್ನು ನಮ್ಮ ನೆನಪಿಗೆ ತರುವಾತನಾಗಿದ್ದೀ. ಆದುದರಿಂದ ನಮ್ಮನ್ನು ಉಂಟುಮಾಡಿದಾತನಾದ, ಪೋಷಿಸುವಾತನಾದ, ನಮಗೆಲ್ಲವನ್ನು ಒದಗಿಸುವಾತನಾದ ನಿನ್ನನ್ನು ವಂದಿಸಿ ಕೊಂಡಾಡುತ್ತೇವೆ. ಆಮೆನ್.

ಪಾಪದರಿಕೆಯ ಪ್ರಾರ್ಥನೆ: (ಪಾಪದರಿಕೆಯ ಪ್ರಾರ್ಥನೆಯ ಸಮಯದಲ್ಲಿ 4 ಯುವಜನರು ತಮ್ಮ ಕೈಗಳಲ್ಲಿ ಆಯಾ ಪ್ರಾರ್ಥನೆಗೆ ಸಂಬಂಧಿಸಿದ Placard ಗಳನ್ನು ಹಿಡಿದವರಾಗಿ ಸಭೆಗೆ ಅಭಿಮುಖರಾಗಿ ನಿಂತಿರುವುದು.) (ಸಭೆಯ ಸನ್ನಿವೇಶಕ್ಕನುಗುಣವಾಗಿ ಇನ್ನಷ್ಟು ಪ್ರಾರ್ಥನೆಗಳನ್ನು ತಮ್ಮ ಸ್ವಂತಮಾತಿನಲ್ಲಿ ಮಾಡಬಹುದು)

ನಾಯಕರು: ನಿನ್ನನ್ನು ಪ್ರೀತಿಸಿ ನಿನ್ನ ಆಜ್ಞೆಗಳನ್ನು ಕೈಕೊಂಡು ನಡೆಯುವವರನ್ನು ಪ್ರೀತಿಸುವ ಅದ್ಭುತನಾದ ದೇವರು ನೀನಾಗಿದ್ದೀ. ನಿನ್ನ ಕೃಪಾಸಿಂಹಾಸನದ ಎದುರು ನಿನ್ನ ಕರುಣೆಯನ್ನು ಅರಸುವವರಾಗಿ ಬಂದಿದ್ದೇವೆ. ನಾವು ತಪ್ಪುಮಾಡಿ ಪಾಪವನ್ನೆಸಗಿದ್ದೇವೆ. ನಾವು ಕ್ರೂರಿಗಳಾದೆವು, ದಂಗೆ ಎದ್ದವರಾದೆವು. ನಿನ್ನ ಆಜ್ಞೆ ನಿಬಂಧನೆಗಳಿಗೆ ವಿಧೇಯರಾಗಲಿಲ್ಲ. ನಮ್ಮ ಮನಸ್ಸಾಕ್ಷಿಯ ಪಿಸುದನಿಗೆ ಕಿವಿಗೊಡಲಿಲ್ಲ. ನಮ್ಮ ಬಲಹೀನತೆಗಳನ್ನು ನಾವು ಅರಿಕೆಮಾಡುವಲ್ಲಿ ನಮ್ಮ ಅರಿಕೆ ನಿಜವಾದದ್ದಾಗಿರುವಂತೆಯೂ ನಾವು ನಿನ್ನ ಕೃಪೆಯನ್ನು ಪ್ರೀತಿಯನ್ನು ಅರಸುವವರಾಗಿರುವಂತೆಯೂ ಸಹಾಯಮಾಡೆಂದು ನಿನ್ನ ಕುಮಾರನೂ ನಮ್ಮ ಪ್ರಭುವೂ ರಕ್ಷಕನೂ ಆಗಿರುವ ಯೇಸು ಕ್ರಿಸ್ತನ ಹೆಸರಿನಲ್ಲಿ ಬೇಡಿಕೊಳ್ಳುತ್ತೇವೆ. ಆಮೆನ್.

ನಿರುದ್ಯೋಗ:

ನಾಯಕರು:ಸಂಪನ್ಮೂಲಗಳ ದೇವರೇ, ನಿನ್ನ ಯಥೇಚ್ಛವಾದ ಕೃಪೆಯಿಂದ ನಮ್ಮ ನಾಡನ್ನು ಸ್ವಾಭಾವಿಕ ಸಂಪನ್ಮೂಲಗಳಿಂದ ತುಂಬಿಸಿದ್ದೀ ಹಾಗೂ ಎಲ್ಲಾ ಜನರನ್ನು ನಿನ್ನ ಜ್ಞಾನ ಮತ್ತು ವಿವೇಕಗಳನ್ನು ನೀಡಿ ಆಶೀರ್ವದಿಸಿದ್ದೀ. ನಮ್ಮ ಬಲಹೀನತೆ ಹಾಗೂ ನ್ಯೂನ್ಯತೆಗಳನ್ನು ನೆನಪಿಗೆ ತಂದುಕೊಳ್ಳುವಂತೆ ನಮಗೆ ಸಹಾಯಮಾಡು. ಅನೇಕ ವೇಳೆ ನಾವು ಆರ್ಥಿಕ ಶಕ್ತಿಗಳ ಬಲಿಪಶುಗಳಾಗಿದ್ದೇವೆ. ನಾವಿರುವ ಸಮಾಜ ಮತ್ತು ಸಾಮಾಜಿಕ ರಚನೆಗಳಲ್ಲಿ ಸಮತೋಲನವಿಲ್ಲದೆ ಹೋಗಿ ಉದ್ಯೋಗವನ್ನು ಅರಸುವವರಿಗೆ ತಕ್ಕ ಉದ್ಯೋಗವಿಲ್ಲದಾಗಿದೆ ಎಂದು ನಿನ್ನಲ್ಲಿ ಅರಿಕೆಮಾಡುತ್ತೇವೆ. ಹೀಗಾಗಿ ಅವರ ಸ್ವಗೌರವಕ್ಕೆ ಕುಂದುಂಟಾಗಿದೆ. ನಮ್ಮ ಅಸಮತೋಲನ ಸಾಮಾಜಿಕ ರಚನೆಗಳನ್ನು ಪುನಃನಿರ್ಮಾಣ ಮಾಡುವಲ್ಲಿ ನಾವು ಬಿದ್ದುಹೋಗಿದ್ದೇವೆ.

ಸಭೆ: ಸಂಪನ್ಮೂಲಗಳ ದೇವರೇ, ಅಸಮತೋಲದಲ್ಲಿರುವ ನಮ್ಮ ಸಾಮಾಜಿಕ ರಚನೆಗಳನ್ನು ಪುನಃನಿರ್ಮಾಣಗೊಳಿಸುವಂತೆ ನಮ್ಮನ್ನು ಬಲಗೊಳಿಸು.

ದುಶ್ಚಟಗಳು (ವ್ಯಸನಗಳು):

ನಾಯಕರು: ಬಿಡುಗಡೆಯ ದೇವರೇ, ಅನೇಕ ಯುವಜನರು ದುಶ್ಚಟಗಳಲ್ಲಿ ಸಿಲುಕಿದವರಾಗಿ ಏಕಾಂಗಿತನಕ್ಕೂ ಅನೇಕರ ನಿರಾಕರಣೆಗೂ ಒಳಗಾಗಿದ್ದಾರೆ. ಅವರ ದುರಭ್ಯಾಸಗಳಿಂದಾಗಿ ತಮಗೆ ತಾವೇ ಭಾರವಾಗಿರುವುದು ಮಾತ್ರವಲ್ಲ ತಮ್ಮ ಕುಟುಂಬಗಳಿಗೂ ಭಾರವಾಗಿದ್ದಾರೆ. ಕುಟುಂಬಗಳು ಅವಮಾನಕ್ಕೀಡಾಗಿವೆ. ಕೃಪಾಳು ದೇವರೇ, ನಮ್ಮ ಹತಾಶೆಯಲ್ಲಿ ಹಾಗೂ ನಾವು ಸಿಲುಕಿಕೊಂಡಿರುವ ದುಶ್ಚಟಗಳಲ್ಲಿ ನಿನ್ನ ಕರುಣೆಗಾಗಿ ನಿನ್ನಲ್ಲಿ ಬೇಡುತ್ತೇವೆ. ನಾನಾ ರೂಪದ ದುಶ್ಚಟಗಳ ದಾಸರಾಗಬಾರದೆಂಬ ಆಶೆ

ನಮ್ಮದು.ನಾವು ವಿಮೋಚಕನಾದ ನಿನ್ನನ್ನು ದೃಷ್ಟಿಸುತ್ತೇವೆ. ನಿನ್ನ ಪ್ರೀತಿಯನ್ನು ನಾವು ಸ್ವೀಕರಿಸಿಕೊಳ್ಳುವಂತೆ ನಮ್ಮನ್ನು ಬಲಪಡಿಸು. ನಮ್ಮ ದುಶ್ಚಟಗಳಿಂದ ನಮ್ಮನ್ನು ಮುಕ್ತರನ್ನಾಗಿ ಮಾಡು.

ಸಭೆ: ವಿಮೋಚಕನಾದ ದೇವರೇ, ದುಶ್ಚಟಗಳಿಂದ ಹೊರಬರುವ ಬಲವನ್ನು ನಿನ್ನ ಮಕ್ಕಳಿಗೆ ಅನುಗ್ರಹಿಸು.

ನಿರಾಕರಣೆ:

ನಾಯಕರು: ಎಲ್ಲರನ್ನು ಒಪ್ಪಿಕೊಳ್ಳುವ ದೇವರೇ, ಸಭೆಗಳಲ್ಲಿ ಮತ್ತು ಇನ್ನಿತರೇ ಸ್ಥಳಗಳಲ್ಲಿ ನಮ್ಮ ಉಡುಗೆ ತೊಡುಗೆಗಳಿಂದಾಗಿ ಕಡೆಗಾಣಿಸಲ್ಪಟ್ಟಿದ್ದೇವೆ. ನಾವು ನಮ್ಮ ಜೀವನಕ್ರಮದಲ್ಲಿ ನಮಗೆ ಹಿತವೆನಿಸುವ ವಲಯವನ್ನು ಅರಸುತ್ತೇವೆ.ಆದಾಗ್ಯೂ ನಮ್ಮ ಇರುವ ನಮ್ಮ ಸಮ್ಮುಖ ಅನೇಕರಿಗೆ ಹಿತವಾಗದು. ನಾವು ಸಂದಿಗ್ಧಪರಿಸ್ಥಿತಿಯಲ್ಲಿದ್ದೇವೆ. ಅಡ್ಡರಸ್ತೆಯಲ್ಲಿದ್ದಂತಿದ್ದೇವೆ. ನಿನ್ನ ಮಾರ್ಗದರ್ಶನಕ್ಕಾಗಿ ಕಾದಿದ್ದೇವೆ.

ಸಭೆ: ಎಲ್ಲರನ್ನು ಒಪ್ಪಿಕೊಳ್ಳುವ ದೇವರೇ, ಅವರು ಇರುವಂತೆಯೇ ಅವರನ್ನು ಒಪ್ಪಿಕೊಳ್ಳುವಂಥ ಮನಸ್ಸನ್ನು ನಮಗೆ ದಯಪಾಲಿಸು.

ಧಾರ್ಮಿಕ ಮೂಲಭೂತವಾದ

ನಾಯಕರು: ಪ್ರೀತಿಯ ದೇವಾ, ನಮ್ಮಲ್ಲಿ ಅನೇಕರು ನಮ್ಮ ನಮ್ಮ ಧಾರ್ಮಿಕ ವಿಶ್ವಾಸದ ಮೇಲೆ ತಪ್ಪು ಕಲ್ಪನೆಯನ್ನು ಹೊಂದಿದ್ದೇವೆ. ಅನೇಕ ವೇಳೆ ನಮ್ಮ ವಿಶ್ವಾಸ, ನಂಬಿಕೆ ಹಾಗೂ ಧಾರ್ಮಿಕ ಆಚಾರ ವಿಚಾರಗಳಲ್ಲಿ ಇತರರಿಗಿಂತ ನಾವೇ ಶ್ರೇಷ್ಠರು ಎಂಬುದಾಗಿ ಭಾವಿಸಿದ್ದೇವೆ.ತಿಳಿದೋ ತಿಳಿಯದೆಯೋ ನಮ್ಮಲ್ಲಿನ ವಿಭಜನೆ ಮತ್ತು ಗೊಂದಲಗಳಿಗೆ ನಾವೇ ಕಾರಣಸ್ಥರಾಗಿ ಪರಸ್ಪರರಲ್ಲಿ ದ್ವೇಷವನ್ನು ಹುಟ್ಟುಹಾಕುವವರಾಗಿದ್ದೇವೆ. ಎಲ್ಲಾ ಧರ್ಮಗಳನ್ನು ಗೌರವಿಸಬೇಕೆಂಬುದನ್ನು ನಾವು ಒಪ್ಪಿಕೊಳ್ಳುವಲ್ಲಿ ಬಿದ್ದುಹೋಗಿ ನಮ್ಮ ಜೊತೆಮಾನವರನ್ನು ಪ್ರೀತಿಸದೆ ಹೋಗಿದ್ದೇವೆ. ಈ ಕಾರಣದಿಂದಾಗಿ ನಮ್ಮ ಸಭೆ ಮತ್ತು ಸಮಾಜ ಇಂದು ಸ್ವಯಂ ಕೇಂದ್ರಿತಗಳಾಗಿವೆ.

ಸಭೆ: ಪ್ರೀತಿಯ ದೇವಾ, ನಮ್ಮನ್ನು ಕ್ಷಮಿಸಿ ನೀನು ನಮ್ಮನ್ನು ಪ್ರೀತಿಮಾಡಿದಂತೆ ನಾವೂ ಒಬ್ಬರನ್ನೊಬ್ಬರು ಪ್ರೀತಿಸುವಂತೆ ನಮ್ಮನ್ನು ಬಲಪಡಿಸು.

ಪಾಪಕ್ಷಮಾಪಣೆಯ ಭರವಸೆಯ ಪ್ರಾರ್ಥನೆ:

ಸಭಾಪಾಲಕರು: ನಮ್ಮ ಬಲಹೀನತೆ, ಪಾಪಗಳನ್ನು ಲೆಕ್ಕಿಸದೆ ತನ್ನ ಕೃಪೆ ಮತ್ತು ಪ್ರೀತಿಯಿಂದ ದೇವರು ತನ್ನ ಕುಮಾರನ ಮರಣ ಪುನರುತ್ಥಾನಗಳ ಮೂಲಕ ಲೋಕವನ್ನು ತನ್ನೊಟ್ಟಿಗೆ ಸಂಧಾನಮಾಡಿಕೊಂಡಿದ್ದಾನೆ. ತನ್ನ ಸಂಧಾನದ ಸೇವೆಯನ್ನು ಕ್ರಿಸ್ತನು ತನ್ನ ಸಭೆಗೆ ನೀಡಿರಲಾಗಿ ನಿಮ್ಮ ವಿಶ್ವಾಸ, ನಿರೀಕ್ಷೆ ಮತ್ತು ಪ್ರೀತಿಯಲ್ಲಿ ದೃಢವಾಗಿ ನಿಲ್ಲುವುದಕ್ಕೂ ಬಿಡುಗಡೆ, ಪ್ರೀತಿ ಮತ್ತು ಪರಸ್ಪರರನ್ನು ಒಪ್ಪಿಕೊಳ್ಳುವಲ್ಲಿ ಸಂಪರ್ಕಸಾಧನಗಳೂ ಆಗುವಂತೆ ಆತನ ಕ್ಷಮೆಯನ್ನೂ ಸಮಾಧಾನವನ್ನೂ ಸ್ವೀಕರಿಸಿಕೊಳ್ಳಿರಿ. ಆಮೆನ್.

ಸಮಾಧಾನದ ವಂದನೆ (ಇಲ್ಲಿ ಸಮಾಧಾನದ ವಂದನೆಯನ್ನು ನೀಡಬಹುದು)
ಸಭಾಪಾಲಕರು: ದೇವರ ಸಮಾಧಾನ ನಿಮ್ಮೊಂದಿಗಿರಲಿ.
ಸಭೆ: ನಿನ್ನೊಂದಿಗೂ ಇರಲಿ.

ದಿನಕ್ಕೆ ನೇಮಕವಾದ ಸಂಗ್ರಹ ಪ್ರಾರ್ಥನೆ : (ಎಲ್ಲರು ಒಟ್ಟಾಗಿ)

ಜೀವವೂ ಪ್ರೀತಿಯೂ ಆಗಿರುವ ದೇವಾ, ತನ್ನ ಸಂಪೂರ್ಣವಾಗಿ ನಿನ್ನ ಚಿತ್ತಕ್ಕೆ ಒಪ್ಪಿಸಿಕೊಟ್ಟು ನಮಗೆ ಮಾದರಿಯಾದ ನಿನ್ನ ಕುಮಾರನೂ ನಮ್ಮ ಪ್ರಭುವೂ ಆದ ಯೇಸು ಕ್ರಿಸ್ತನಿಗಾಗಿ ನಿನಗೆ ಸ್ತೋತ್ರ. ನಮ್ಮ ಯುವಜನರು ತಮ್ಮ ಸೃಜನಶೀಲತೆ, ಜ್ಞಾನ, ಬಲಗಳನ್ನು ಮಾನವರ ಸೇವೆಯಲ್ಲಿ ಉಪಯೋಗಿಸುವುದರ ಮೂಲಕ ನಿನ್ನ ಸೇವೆಗೈಯುವಂತೆ ಅವರಿಗೆ ಸಹಾಯ ದಯಪಾಲಿಸು. ತಾವು ಕ್ರಿಸ್ತಕೇಂದ್ರಿತರು ಹಾಗೂ ನ್ಯಾಯ ಆಧಾರಿತರು ಆಗುವಂತೆ ಅವರನ್ನು ಬಲಪಡಿಸೆಂದು ನಿನ್ನೊಂದಿಗೂ ಪವಿತ್ರಾತ್ಮನೊಂದಿಗೂ ಕೂಡಿ ಏಕದೇವರಾಗಿ ಸದಾ ಜೀವಿಸಿ ಆಳುವ ಯೇಸು ಕ್ರಿಸ್ತನ ಮೂಲಕ ಬೇಡಿಕೊಳ್ಳುತ್ತೇವೆ. ಆಮೆನ್.

ಕೀರ್ತನಾ ಸಂಗ್ರಹ 98 (ಉತ್ತರ ಪ್ರತ್ಯುತ್ತರವಾಗಿ ಓದಿಕೊಳ್ಳಬಹುದು)
(ಓದಿ ಮುಗಿದ ನಂತರ)

ಸಭಾಪಾಲಕರು: ತಂದೆ ಮಗ ಪರಿಶುದ್ಧಾತ್ಮಗೆ ಮಹಿಮೆಯಾಗಲಿ ;
ಸಭೆ: ಆದಿಯಲ್ಲಿದ್ದಂತೆಯೇ ಈಗಲೂ ಎಂದೆಂದಿಗೂ . ಆಮೆನ್.

ಸತ್ಯವೇದ ಪಾರಾಯಣ
ಮೊದಲನೆಯ ಪಾರಾಯಣ: ದಾನಿಯೇಲ 1 : 1 -17
ಎರಡನೆಯ ಪಾರಾಯಣ : ಆಪೋ. ಕೃತ್ಯಗಳು. 6 : 1 -7
ಮೂರನೆಯ ಪಾರಾಯಣ: ಯೋಹಾನ 1 : 35 -42
(ಪಾರಾಯಣಗಳ ನಡುವೆ ವಿಶೇಷ ಗೀತೆ ಇಲ್ಲವೇ ಕಿರುನಾಟಕವನ್ನು ಸಭೆಯ ಅನುಕೂಲಕ್ಕನುಗುಣವಾಗಿ ಪ್ರಸ್ತುತಪಡಿಸಬಹುದು)

ಪ್ರಸಂಗ

ಅಪೊಸ್ತಲರ ವಿಶ್ವಾಸ ಸೂತ್ರ (ಸಂದರ್ಭಕ್ಕನುಸಾರ ಮಾರ್ಪಡಿಸಲಾಗಿದೆ)

ನನ್ನ ತಾಯಗರ್ಭದಿಂದಲೇ ನನ್ನನ್ನು ಅರಿತಿದ್ದೇನೆಂದು ವಾಗ್ದಾನಮಾಡಿದ ಸೃಷ್ಟಿಕರ್ತನಾದ ದೇವರನ್ನು ನಾನು ನಂಬುತ್ತೇನೆ. ಯೌವ್ವನ ದಿನಗಳಲ್ಲಿ ತಾನು ಮಾಡಿದ ಒಡಂಬಡಿಕೆಯನ್ನು ನೆನಪಿನಲ್ಲಿಟ್ಟುಕೊಂಡು ಹಾಗೂ ಶಾಶ್ವತವಾದ ಒಡಂಬಡಿಕೆಯನ್ನು ಮಾಡಿದಾತನನ್ನು ನಂಬುತ್ತೇನೆ.

ಆತನ ಏಕಕುಮಾರನಾಗಿರುವ ನಮ್ಮ ಪ್ರಭುವಾದ ಯೇಸು ಕ್ರಿಸ್ತನನ್ನು ನಂಬುತ್ತೇನೆ. ಈತನು ಪರಿಶುದ್ಧಾತ್ಮನಿಂದ ದೀನಸ್ಥಿತಿಯಲ್ಲಿರುವವರನ್ನು ಮೇಲೆತ್ತುವ ವಿಮೋಚನಾ ಗೀತವನ್ನು ಹಾಡಿದ ಕನ್ಯಾಮರಿಯಳ ಗರ್ಭದಲ್ಲಿ ಧರಿಸಲ್ಪಟ್ಟು, ಆಕೆಯಲ್ಲಿ ಹುಟ್ಟಿದನು. ಈತನು ತನ್ನ ಯೌವ್ವನ ಕಾಲದಲ್ಲಿ ಭೂಮಿಯಲ್ಲಿ ದೇವರ ರಾಜ್ಯವನ್ನು ಸ್ಥಾಪಿಸುವ ತನ್ನ ಸೇವೆಯನ್ನು ಆರಂಭಿಸಿದನು . ಅದಕ್ಕಾಗಿ ಪೊಂತಿ ಪಿಲಾತನ ಆಧಿಪತ್ಯದಲ್ಲಿ ಶ್ರಮೆಹೊಂದಿ , ದೂಷಣೆಗಳೊಡನೆ ಶಿಲುಬೆಗೆ ಹಾಕಲ್ಪಟ್ಟು , ಹೀನಾಯ ಮರಣವನ್ನನುಭವಿಸಿ, ಸಮಾಧಿಯಲ್ಲಿಡಲ್ಪಟ್ಟನು.

ಮರಣವು ಆತನನ್ನು ಹಿಡಿದಿಟ್ಟುಕೊಳ್ಳಲಾಗಲಿಲ್ಲ , ಆತನು ಮೂರನೆಯ ದಿನದಲ್ಲಿ ಸತ್ತವರೊಳಗಿಂದ ಎದ್ದುಬಂದನು. ದೇವರ ನಿಯೋಗದ ಜವಾಬ್ದಾರಿಯನ್ನು ನಮ್ಮ ಕೈಗೊಪ್ಪಿಸಿ ಪರಲೋಕಕ್ಕೆ ಏರಿಹೋದನು.

ನಾನು ಸತ್ಯ ಮತ್ತು ಧೈರ್ಯದಾಯನಾದ ಪವಿತ್ರಾತ್ಮನನ್ನು ನಂಬುತ್ತೇನೆ. ಅಂದಿನ ಭಕ್ತಜನರ ಅನ್ಯೋನ್ಯತೆಯಲ್ಲಿ ಇಂದಿನ ಯುವಜನರ ದರ್ಶನದೊಂದಿಗೆ ಸ್ಥಾಪಿತವಾದ ಒಂದೇ ಸಾರ್ವತ್ರಿಕ ಸಭೆಯಿದೆಯೆಂದು ನಂಬುತ್ತೇನೆ. ಇಂದಿಗೂ ಎಂದಿಗೂ ತಮ್ಮ ಯೌವ್ವನ ಕಾಲದಲ್ಲಿ ಯೇಸು ಕ್ರಿಸ್ತನ ಅನುಕರಣೆಮಾಡುತ್ತಾ ಇತರರಿಗೆ ಮಾದರಿಯಾಗುವಂತೆ ದೇವರ ನಂಬಿಗಸ್ತಿಕೆಯು ನಮಗೆ ಮಾರ್ಗ ತೋರುವುದೆಂದು ನಂಬುತ್ತೇನೆ. ಆಮೆನ್.

ಪರಾರ್ಥ ಪ್ರಾರ್ಥನೆಗಳು: (ಕೆಲಕಂಡ ವಿಷಯಗಳಿಗಾಗಿ ಪ್ರಾರ್ಥಿಸುವುದು. ಪ್ರತಿ ಬಿನ್ನಹದ ನಂತರ 'ನಮ್ಮ ಪ್ರಾರ್ಥನೆಯನ್ನು ಆಲೈಸು' ಎಂದು ಸಭೆಯವರು ಹೇಳುವುದು)

1.ನಮ್ಮ ದೇಶದ ಆರ್ಥಿಕ ಮುಗ್ಗಟ್ಟಿನಿಂದ ಸಂಕಷ್ಟವನ್ನನ್ನುಭವಿಸುತ್ತಿರುವ ಯುವಜನರಿಗಾಗಿ ಅದರಲ್ಲೂ ವ್ಯವಸಾಯಗಾರರು, ನಿರುದ್ಯೋಗಿಗಳಿಗಾಗಿ ಪ್ರಾರ್ಥನೆ

2.ಕಿರುಕುಳ ಹಾಗೂ ನಿಂದನೆಗೊಳಗಾದ ಯುವಜನರಿಗಾಗಿ ವಿಶೇಷವಾಗಿ ದುಶ್ಚಟಗಳಲ್ಲಿ ಸಿಲುಕಿಕೊಂಡವರಿಗಾಗಿ ಪ್ರಾರ್ಥನೆ

3.ಸಾಮಾಜಿಕವಾಗಿ ಕಳಂಕಗಳಿಗೊಳಗಾಗಿ ಸಮಾಜ ಮತ್ತು ಕುಟುಂಬಗಳಲ್ಲಿ ತಿರಸ್ಕರಿಸಲ್ಪಟ್ಟವರಿಗಾಗಿ ಪ್ರಾರ್ಥನೆ

4. ಧಾರ್ಮಿಕ ಹಾಗು ಸಾಂಸ್ಕೃತಿಕ ಮೂಲಭೂತವಾದಗಳಿಗೆ ಬಲಿಪಶುಗಳಾದ ಯುವಜನರಿಗಾಗಿ ಅದರಲ್ಲೂ ಇತರೆ ಧರ್ಮಗಳ, ಸಂಸ್ಕೃತಿಗಳ ಬಗ್ಗೆ ಸಹಿಷ್ಣತೆ ಇಲ್ಲದವರಿಗಾಗಿ ಪ್ರಾರ್ಥನೆ

ಪ್ರತಿಷ್ಠೆಮಾಡಿಕೊಳ್ಳುವ ಪ್ರಾರ್ಥನೆ:

(ಆರಾಧನೆಯಲ್ಲಿ ಪಾಲ್ಗೊಂಡ ಎಲ್ಲಾ ಯುವ ಜನರು ಮುಂದೆ ಬಂದು ಇಲ್ಲವೇ ತಾವಿದ್ದ ಸ್ಥಳದಲ್ಲಿಯೇ ಎದ್ದು ನಿಂತು ಒಟ್ಟಾಗಿ ಪ್ರಾರ್ಥಿಸುವುದು)

ನಮ್ಮ ಪರಲೋಕದ ತಂದೆಯಾದ ದೇವರೇ , ನಮ್ಮನ್ನು ನಾವು ಪ್ರತಿಷ್ಠೆಮಾಡಿಕೊಳ್ಳುವವರಾಗಿ ನಿನ್ನ ಸನ್ನಿಧಿಯಲ್ಲಿದ್ದೇವೆ. ಈ ಲೋಕದಲ್ಲಿ ನಿನ್ನ ಕಾರ್ಯಗಳನ್ನು ಮಾಡಿ ಮುಗಿಸಲು ನಿನ್ನ ಜೊತೆಗಾರರಾಗಿರುವೆವೆಂದು ನಮ್ಮನ್ನು ಒಪ್ಪಿಸಿಕೊಡುತ್ತೇವೆ . ನ್ಯಾಯ, ಸಮಾಧಾನ ಮತ್ತು ಸಂಧಾನ ಜೀವಿತಕ್ಕಾಗಿ ನಮ್ಮನ್ನು ಒಪ್ಪಿಸಿಕೊಡುತ್ತೇವೆ . ನಮ್ಮ ಈ ಪ್ರತಿಷ್ಠೆಯ ಮೂಲಕ ನಮ್ಮ ಕುಟುಂಬ ಮತ್ತು ಸಮಾಜವು ಜೀವಿಸಲು ಯೋಗ್ಯವಾದ ಉತ್ತಮ ಬೀಡಾಗುವವು. ನಮ್ಮ ಯೋಚನೆ, ನುಡಿ ಮತ್ತು ಕ್ರಿಯೆಗಳ ಮೂಲಕ ನಿನ್ನ ಸಾಕ್ಷಿಗಳಾಗಿರುವೆವೆಂದು ನಮ್ಮನ್ನು ಪ್ರತಿಷ್ಠೆಮಾಡಿಕೊಳ್ಳುತ್ತೇವೆ. ಸಹಾಯಿಸು ದೇವಾ. ಆಮೆನ್.

ಅಂತ್ಯಾಶೀರ್ವಾದ

(ರೊಟ್ಟಿಮುರಿಯುವ ಭಾಗ ಇಲ್ಲಿಂದ ಮುಂದುವರೆಯುವುದು)